ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಎಸ್.ಸಿ ನಂ: **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆನಂದ ಕಪ್ಪತ್ತಿ | ಪ್ರಾಸಾ: 10 |
| ತಂದೆಯ ಹೆಸರು | : | ಸೋಮಪ್ಪಾ ಕಪ್ಪತ್ತಿ | ಚಾಸಾ: 28 |
| ಪ್ರಾಯ | : | 34 ವರ್ಷ | ದಿನಾಂಕ 18.07.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಿಪಿಸಿ, ರಾಮದುರ್ಗ ಪೋಲಿಸ ಠಾಣೆ | |
| ವಾಸಸ್ಥಳ | : | ರಾಮದುರ್ಗ. | |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ದಿನಾಂಕ **15.05.2019** ರಿಂದ ದಿನಾಂಕ **30.08.2024** ರವರೆಗೆ ಸವದತ್ತಿ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕ **18.08.2022** ರಂದು ಈ ಕೇಸಗೆ ಸಂಬಂಧಪಟ್ಟಂತೆ ಆರೋಪಿಯನ್ನು ಪತ್ತೆ ಮಾಡಿ ತಂದು ಹಾಜರು ಪಡಿಸುವಂತೆ ಆರಕ್ಷಕ ನೀರಿಕ್ಷಕರಾಗಿದ್ದ ಚಾಸಾ-**31** ಕರುಣೇಶಗೌಡ ಇವರು ನನಗೆ ಮತ್ತು ಸಿಪಿಸಿ ನಂಬರ **3446** ಎಮ್. ಪಿ. ತೆರದಾಳ ಇವರಿಗೆ ಜ್ಞಾಪನ ಪತ್ರ ನೀಡಿರುತ್ತಾರೆ.

ಈಗ ತೋರಿಸಿದ ದಾಖಲೆಯು ಸದರಿ ಜ್ಞಾಪನ ಪತ್ರವಾಗಿದ್ದು, ಅದನ್ನು ನಿಪಿ-**36** ಎಂದು ಮತ್ತು ಅದರನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**36**(ಎ) ಎಂದು ಗುರುತಿಸಲಾಯಿತು.

**3.** ಸದರಿ ಜ್ಞಾಪನ ಪತ್ರದಂತೆ ಆರೋಪಿಯನ್ನು ಪತ್ತೆ ಮಾಡುವಂತೆ ಅದೇ ದಿನ ಸಾಯಂಕಾಲ ಸುಮಾರು **06.45** ಗಂಟೆ ಸಮಯದಲ್ಲಿ ನಾವು ಪೋಲಿಸ ಠಾಣೆಯಿಂದ ಹೊರಗಡೆ ಹೋಗುತ್ತಿದ್ದಾಗ, ಪೋಲಿಸ ಠಾಣೆಯ ಮುಂದುಗಡೆ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಅನುಮಾನಾಸ್ಪದವಾಗಿ ನಿಂತಿದ್ದು, ಆತನ ಕೈಯಲ್ಲಿ ಚಾಕು ಇತ್ತು. ಸದರಿ ವ್ಯಕ್ತಿಯ ಮೈಮೇಲೆ ಇದ್ದ ಬಟ್ಟೆಗಳಲ್ಲಿ ರಕ್ತದ ಕಲೆಗಳು ಇದ್ದವು. ಆಗ ನಾವು ಹೋಗಿ ಸದರಿ ವ್ಯಕ್ತಿಯ ಹೆಸರು ಕೇಳಿರುತ್ತೇವೆ. ಆಗ ಸದರಿ ವ್ಯಕ್ತಿ ತನ್ನ ಹೆಸರು ಮೆಹಬೂಬಸಾಬ್ ಗರೀಬಸಾಬ್ ಗೊರವನಕೊಳ್ಳ, ಸಾಕೀನ ಮುನವಳ್ಳಿ ಎಂದು ಹೇಳಿರುತ್ತಾನೆ. ಆತನ ಹೆಸರು ತಿಳಿದುಕೊಂಡು ಆತನು ಈ ಕೇಸಗೆ ಸಂಬಂಧಪಟ್ಟ ಆರೋಪಿ ಎಂದು ನಿಶ್ಚಯಿಸಿ ಆತನನ್ನು ಹಿಡಿದು ಪೋಲಿಸ ಠಾಣೆಗೆ ಸಂಜೆ **07.00** ಗಂಟೆ ಸಮಯದಲ್ಲಿ ಚಾಸಾ-**31** ರವರ ಮುಂದೆ ಹಾಜರು ಪಡಿಸಿರುತ್ತೇವೆ. ಆ ಬಗ್ಗೆ ನಾನು ಚಾಸಾ-**31** ರವರಿಗೆ ವರದಿ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ವರದಿಯಾಗಿದ್ದು, ಅದನ್ನು ನಿಪಿ-**37** ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-**37**(ಎ) ಎಂದು ಗುರುತಿಸಲಾಯಿತು. ಸದರಿ ವ್ಯಕ್ತಿಯನ್ನು ಈಗ ನಾನು ನೋಡಿದರೇ ಗುರುತಿಸಬಲ್ಲೆ. ಈಗ ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರಾಗಿರುವ ಆರೋಪಿ ಸದರಿ ವ್ಯಕ್ತಿಯಾಗಿರುತ್ತಾನೆ.

ಪಾಟೀ ಸವಾಲುಃ ಆರೋಪಿಗಳ ಪರವಾಗಿಃ ಶ್ರೀ ಪಿ ಜೆ ಜಿ (ಡಿ ಎಲ್ ಎಸ್ ಎ) ವಕೀಲರಿಂದಃ

**4.** ನಾವು ಪೋಲಿಸ ಠಾಣೆಯಿಂದ ಸಾಯಂಕಾಲ **06.45** ಕ್ಕೆ ಹೊರಗಡೆ ಬಂದಿರುತ್ತೇವೆ ಎಂದು ನಿಪಿ-**37** ವರದಿಯಲ್ಲಿ ಹೇಳಿಲ್ಲ ಎಂದರೆ ಸರಿ. ನಾವು ಆರೋಪಿಯನ್ನು ನೋಡಿದಾಗ ಆತ ಗುಲಾಬಿ ಬಣ್ಣದ ಶರ್ಟ ಧರಿಸಿದ್ದ. ಆದರೆ ಆತ ಧರಿಸಿದ ಬಟ್ಟೆಯ ಬಣ್ಣವನ್ನು ನಿಪಿ-**37** ವರದಿಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ಮತ್ತು ಈ ಮೇಲೆ ಹೇಳಿರುವ ಇನ್ನೊರ್ವ ಸಿಬ್ಬಂದಿ ಆರೋಪಿಯನ್ನು ಹಿಡಿದು ಠಾಣೆಗೆ ತಂದು ಚಾಸಾ-**31** ರವರ ಮುಂದೆ ಹಾಜರು ಪಡಿಸಿರುತ್ತೇವೆಂದು ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ನಿಪಿ-**37** ರಂತೆ ಸುಳ್ಳು ದಾಖಲೆ ಸೃಷ್ಟಿಸಿ ಈಗ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.